(ಗೊಂದಲ)

ಅಧ್ಯಕ್ಷರು: ನೀವು petition ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವ ಹಾಗಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾನು ತಮ್ಮ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯ ನ್ಯಾಯಾಲಯದವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾವು ಮನವಿ ಮಾಡುತ್ತಿದ್ದೇವೆ. ನಾವು ಕೊಟ್ಟಂಥ petition ಏನಾಯಿತು ?

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿರಿ. ನನಗೆ ಗೊತ್ತಿದೆ. ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ಕೊಟ್ಟಂಥ ಅರ್ಜಿಗೆ ಮೊದಲು ರೂಲಿಂಗ್ ಕೊಡಿ. ನಂತರ ಮತಕ್ಕೆ ಹಾಕಿ ಅಷ್ಟೆ.

(ಗೊಂದಲ)

ಪ್ರಸ್ತಾವ ಏನೆಂದರೆ :

" ಈ ಸದನವು ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತ ಪಡಿಸುತ್ತದೆ."

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ನಾನು ಡಿವಿಜನ್‌ಗೆ ಒತ್ತಾಯಿಸುತ್ತೇನೆ.

ಸಭೆಯನ್ನು ವಿಭಜಿಸಲಾಯಿತು

ಅಧ್ಯಕ್ಷರು : ವಿಭಜಿಸಿದಾಗ ಫಲಿತಾಂಶ ಹೀಗಿದೆ.

ಹೌದು – 138

ಇಲ್ಲ – 66

ಸೂಚನೆಯು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಶ್ವಾಸಮತ ಕೋರುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಇಂದು ಬೆಳಗ್ಗೆಯಿಂದ ಇಷ್ಟು ಹೊತ್ತಿನವರೆಗೆ ಸದನದ ನಡವಳಿಕೆಗಳನ್ನು ನಡೆಸಲು ನನ್ನೊಂದಿಗೆ ಸಹಕರಿಸಿದ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು, ಸದನದ ಎಲ್ಲಾ ಸದಸ್ಯರು, ವಿವಿಧ ಮಾಧ್ಯಮಗಳ ಪ್ರತಿನಿಧಿಗಳು, ಅಧಿಕಾರಿಗಳು, ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ದಿನದ ನಡವಳಿಕೆಗಳನ್ನು ದೂರದರ್ಶನದಲ್ಲಿ ನೇರವಾಗಿ ಬಿತ್ತರಿಸಲು ಕ್ರಮ ಕೈಗೊಂಡ ನಿರ್ದೇಶಕರಿಗೂ ಸಹ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ದಿನಾಂಕ 9–2–2006 ರ ಬೆಳಿಗ್ಗೆ 00.32 ಗಂಟೆಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

*****